ನಾಪೋಕ್ಲುನಲ್ಲಿ ಯುವಕರ ತರಬೇತಿ ಕೇಂದ್ರ

೭೫ (೪೮೩) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಾಪೋಕ್ಲುನಲ್ಲಿ ಯುವಜನ ತರಬೇತಿ ಕೇಂದ್ರವು ಶುರುವಾಗಿದೆಯೇ ?

ಆ) ಹಾಗಾದರೆ ಎಷ್ಟು ಜನ ತರಬೇತಿಗೆ ಒಳಪಟ್ಟಿದ್ದಾರೆ ಮತ್ತು ಅದರ ವೆಚ್ಚ ?

ಇ) ತರಬೇತಿಯ ಕಾಲಾವಧಿ ಮತ್ತು ತರಬೇತಿ ಕೊಡುವ ಬಗ್ಗೆ.

ಈ) ಸರ್ಕಾರವು ತರಬೇತಿ ಹೊಂದಿದವರಿಗೆ ಕೆಲಸವನ್ನು ಕೊಡುತ್ತದೆಯೇ ?

ಶ್ರೀ ಪಿ. ಜಿ. ಆರ್ ಸಿಂಧ್ಯಾ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) —ಇಲ್ಲ—

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸರಕಾರಿ ನೌಕರರ ಬೇಡಿಕೆಗಳ ಬಗ್ಗೆ

೭೬ (೨೯೮) ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧-೧-೧೯೮೩ರ ನಂತರ ಸರ್ಕಾರಿ ನೌಕರರು ಸರ್ಕಾರಕ್ಕೆ ಯಾವುದಾದರೂ ಬೇಡಿಕೆಗಳ ಬಗ್ಗೆ ಮನವಿಯನ್ನು ಸಲ್ಲಿಸಿರುವರೇ ?

ಆ) ಹಾಗಿದಲ್ಲಿ ಆ ಬೇಡಿಕೆಗಳು ಯಾವುವು ?

ಇ) ಆ ಬೇಡಿಕೆಗಳಲ್ಲಿ ಯಾವುದಾದರೂ ಬೇಡಿಕೆಗಳನ್ನು ಸರ್ಕಾರ ಈಡೇರಿಸಿದೆಯೆ ? ಹಾಗಿದ್ದಲ್ಲಿ, ಆ ಬೇಡಿಕೆಗಳು ಯಾವುವು ?

ಈ) ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳು ಮುಖ್ಯ ಮಂತ್ರಿಯವರ ಜತೆ ಮಾತುಕತೆ ನಡೆಸಲು ಮನವಿ ಮಾಡಿಕೊಂಡಿದ್ದಾರೆಯೇ ?

ಉ) ಹಾಗಿದ್ದಲ್ಲಿ ಅಂತಹ ಮಾತುಕತೆಗಳು ನಡೆದಿವೆಯೇ, ನಡೆದಿದ್ದರೆ ಎಷ್ಟು ಬಾರಿ ನಡೆದಿವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಒಂದು ಅನುಬಂಧವನ್ನು ಇದರ ಜತೆ ಲಗತ್ತಿಸಿದೆ. (ಪಟ್ಟಿ)

ಇ) ಹೌದು.

(೧) ತುಟ್ಟಿಭತ್ಯದ ಮಂಜೂರಾತಿ

(೨) ಕಾಲಮಿತಿ ಪದೋನ್ನತಿಗೆ ಇರುವ ಷರತ್ತುಗಳ ಸಡಿಲಿಕೆ.

(೩) ಪರಿಷ್ಕೃತ ವೇತನ ಶ್ರೇಣಿಗಳಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ''ಅಫಿಷಿಯಲ್ ಕಮಿಟಿ'' ಯ ರಚನೆ.

(೪) ವೃತ್ತಿ ತೆರಿಗೆಯ ರದ್ದತಿಗೆ ಸಂಬಳದ ಮಿತಿಯನ್ನು ಮಾಸಿಕ ೬೦೦ ರೂ. ನಿಂದ ಮಾಸಿಕ ೧೫೦೦ ರೂ.ಗಳಿಗೆ ಏರಿಕೆ.